ISSN No-2231-5063 Vol.1,Issue.X/April 2012pp.1-4

Research Paper

# ಅಕ್ಕಮಹಾದೇವಿ

*ಡಾ. ಗಂಗಾಂಬಿಕಾ ಪಾಟೀಲ*
*ಕನ್ನಡ ಸಹ -ಪ್ರಾಧ್ಯಾಪಕರು*
*ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ ಬೀದರ*

ಅನೇಕ ಯುಗಗಳಲ್ಲಿ ಒಮ್ಮೆ ಸಿಡಿಯುವ ಚೇತನದಂತೆ ಅಕ್ಕಮಹಾದೇವಿಯ ಜೀವನ ಮಿಂಚಿನಂತೆ ಮೂಡಿ ಮೇಲೇರಿತು. ತನ್ನ ಪ್ರಖರತೆಯಿಂದ ಸಮಾಜದ ಕಣ್ಣು ಕೋರೈಸುವಂತೆ ಮಾಡಿತು. ಆಕೆಯ ಅಧ್ಯಾತ್ಮಿಕ ಪ್ರಭೆ ಶರಣ ಸಂಸ್ಕೃತಿಯಲ್ಲಿ, ಕನ್ನಡಿಗರ ಮನಸ್ಸಿನಲ್ಲಷ್ಟೇ ಅಲ್ಲದೆ, ಈ ದೇಶದ ಇತರ ಭಾಗದಲ್ಲಿಯು ಹುಟ್ಟಿ ಬೆಳೆದಂಥವರ ಮನಸ್ಸಿನಲ್ಲಿಯೂ ತೊಳಗಿಬೆಳಗಿ, ಅವಳ ಬಗ್ಗೆ ವಿಲಕ್ಷಣ ಆಕರ್ಷಣೆ ಮತ್ತು ಅಲೌಕಿಕ ಆದರ ಮೂಡಿಸಿದೆ.

ಆಕೆಯ ಲೌಕಿಕ ಜೀವನದ ಘಟನೆಗಳು ಚರ್ಚಾಸ್ಪದವಾಗಿವೆ. ಅದರಲ್ಲಿಯೂ ಮುಖ್ಯವಾಗಿ ಇದು ಅವಳ ಮದುವೆಯ ಘಟನೆಯ ಸುತ್ತ ಬೆಳೆದಿದೆ. ಈ ವಿಷಯವಾಗಿ ಹರಿಹರ, ಚಾಮರಸ, ಶೂನ್ಯಸಂಪಾದನೆ ಕರ್ತರು ಮತ್ತು ಪುರಾಣ ಕರ್ತರಲ್ಲಿ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಆಕೆ ಮದುವೆ ಆಗಿದ್ದಳೋ ಇಲ್ಲವೋ ಎಂಬ ಚರ್ಚೆ ಇಲ್ಲಿಯವರೆಗೂ ಬುದ್ಧಿಜೀವಿಗಳಿಗೂ, ಅಧ್ಯಾತ್ಮಿಗಳಿಗೂ, ತತ್ತ್ವವೇತ್ತರಿಗೂ ಕಾಡುತ್ತಿವೆ. ಈ ಚರ್ಚೆಯ ನಿರ್ಧಾರ ಏನೇ ಆಗಿದ್ದರೂ ಅದರ ಮೇಲೆ ಆಕೆಯ ಅಧ್ಭುತ ವ್ಯಕ್ತಿತ್ವ ನಿಂತಿಲ್ಲವೆಂದೇ ಹೇಳಬಹುದು.

ಅಕ್ಕಮಹಾದೇವಿಯ ಜನ್ಮಸ್ಥಳ ಉಡುತಡಿಯಾಗಿದ್ದು ಅದು ಶಿವಮೊಗ್ಗ ಜಿಲ್ಲೆಯಲ್ಲಿದೆ. "ಈಗ ಉಡುತಡಿ, ಉಡುಗಣಿ-ತಡಗಣಿ ಎಂದು ಎರಡು ಹಳ್ಳಿಗಳಾಗಿ ಪರಿಣಮಿಸಿವೆ. ಇವರ ತಂದೆ ಓಂಕಾರಶೆಟ್ಟಿ ತಾಯಿ ಲಿಂಗಮ್ಮ ಎಂದು ಹೇಳಲಾಗುತ್ತದೆ." ಕಾವ್ಯಗಳು ಒದಗಿಸುವ ಆಧಾರಗಳ ಮೇರೆಗೆ ಮಹಾದೇವಿಯ ಜನ್ಮ ಗ್ರಾಮ ಉಡುತಡಿ. ಇದನ್ನು ಇಂದಿನ ಉಡುಗಣಿಯೊಂದಿಗೆ ವಿದ್ವಾಂಸರು ಸಮೀಕರಿಸುತ್ತಾರೆ. ಮಹಾದೇವಿಯ ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ ಎಂದು ಕಾವ್ಯಗಳು ಹೇಳುತ್ತಲಿದ್ದರೂ, ಇವು ಆ ಕಾಲದ ಆ ಪರಿಸರದ ವ್ಯಕ್ತಿ ನಾಮಗಳಾಗಿ ತೋರುವದಿಲ್ಲವಾದುದರಿಂದ ಇವುಗಳನ್ನು ಕಲ್ಪಿತ ಹೆಸರುಗಳೆಂದೆ ಇಟ್ಟುಕೊಳ್ಳಬಹುದು."

ಶರಣರ ಚರಿತ್ರೆಗೆ ಸಂಬಂಧಪಟ್ಟಂತೆ ಅನೇಕ ಅಸ್ಪಷ್ಟತೆಗಳು ಅಲ್ಲಲ್ಲಿ ಉಳಿದುಕೊಂಡಿವೆ. ಇದಕ್ಕೆ ಮಹಾದೇವಿಯಕ್ಕ ಹೊರತಾಗಿಲ್ಲ. ಇದು ಅವಳ ಜೀವನಕ್ಕೆ ಸಂಬಂಧಪಟ್ಟಂಥ ಎಲ್ಲಾ ಪ್ರಸಂಗಗಳಲ್ಲಿ ಕಂಡುಬಂದರೂ, ಅವಳ ಹುಟ್ಟಿದ ಕಾಲದ ಬಗ್ಗೆ ವಿಶೇಷವಾಗಿ ಎದ್ದು ಕಾಣುತ್ತದೆ. ಅವಳ ಜನ್ಮದ ಕಾಲದ ಬಗ್ಗೆ ಕಾವ್ಯ, ಪುರಾಣ, ವಚನಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದು ಕಂಡುಬರುವುದಿಲ್ಲ. ಆದರೆ "ಅನೇಕ ಶರಣರನ್ನು ಕರ್ನಾಟಕಕ್ಕೆ ಕೊಟ್ಟ ಈ ಭಾಗದಿಂದ ಸಾಧನೆಯ ಮಾರ್ಗದಲ್ಲಿ, ಮನೋಧರ್ಮದಲ್ಲಿ, ಸಿದ್ಧಿಯ ನಿಲುವಿನಲ್ಲಿ ನಿಲುಗಡೆಯಲ್ಲಿ ಸಾದೃಶ್ಯವನ್ನುಳ್ಳ ಎರಡು ಮಹಾಚೇತನಗಳು ಸ್ವಲ್ಪ ಹೆಚ್ಚು ಕಡಿಮೆ ಏಕಕಾಲದಲ್ಲಿ ಮೂಡಿ ಬಂದವು." ಎಂದು ತಿಪ್ಪೇರುದ್ರಸ್ವಾಮಿಯವರು ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿಯ ಬಗ್ಗೆ ಹೇಳುತ್ತಾರೆ. ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ ಅಕ್ಕ ಹನ್ನೆರಡು ವರುಷದವಳಿದ್ದಳು ಎಂದಿದ್ದಾರೆ.

"ಅನಂತ ವರುಷದವರ ಹಿರಿಯರೆಂಬೆನೆ?
ಎನ್ನೆನು-ಅವರು ಭೂಭಾರಕರಾಗಿ
ಏಳು ವರುಷದ ಹಿರಿಯ ಚೀಲಾಳ
ಹನ್ನೆರಡು ವರುಷದ ಹಿರಿಯಳು ಮಹಾದೇವಿಯಕ್ಕ..."

ಈ ವಚನ ಅಕ್ಕ ಅನುಭವ ಮಂಟಪಕ್ಕೆ ಬಂದಾಗ ಹೇಳಿರಬಹುದು ಎನಿಸುತ್ತದೆ. ಇದರಿಂದಾಗಿ ಅಕ್ಕಮಹಾದೇವಿ ಪ್ರಭುದೇವರ ಸಮಕಾಲೀನಳಾಗಿದ್ದರೂ ಬಹಳ ಚಿಕ್ಕವಳಿದ್ದಳೆಂದು ಕಂಡು ಬರುತ್ತದೆ.

ಮಹಾದೇವಿಯ ಜೀವನದಲ್ಲಿ ಘಟಿಸಿದ ಮುಖ್ಯವಾದ ಎರಡು ಘಟನೆಗಳಲ್ಲಿ ಅವಳ ಜೀವನವನ್ನೇ ಪರಿವರ್ತಿಸಿದ ಘಟನೆಯೆಂದರೆ ರಾಜ ಕೌಶಿಕನದು. "ಈ ಕೌಶಿಕ ಯಾರು? ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಬಗೆಯ ಹೆಸರು ಅಂದು ಪ್ರಚಾರದಲ್ಲಿರಲಿಲ್ಲವಾಗಿ ಇದನ್ನು ನಾವು ಕಲ್ಪಿತನಾಮವೆಂದು ಇಟ್ಟುಕೊಳ್ಳಬಹುದಾದರೂ ಇಂಥ ಒಂದು ಘಟನೆ ಅವಳ ಜೀವನದಲ್ಲಿ ಸಂಭವಿಸಿದುದು ಸತ್ಯವೆಂದು ತೋರುತ್ತದೆ. ಇದನ್ನು ಪೋಷಿಸುವ ಧ್ವನಿಗಳು ಅವಳ ವಚನಗಳಲ್ಲಿ ಕೇಳಿಸುತ್ತವೆ. ವಿದ್ವಾಂಸರು ಈ ಕೌಶಿಕನನ್ನು ಬಳ್ಳಿಗಾವಿ ಪರಿಸರದಲ್ಲಿ ಆಳುತಿದ್ದ ಕಸಪಯ್ಯನೊಂದಿಗೆ ಸಮೀಕರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮಹಾದೇವಿಯ ಉಜ್ವಲ ಲಾವಣ್ಯಕ್ಕೆ ಮೋಹಿತನಾದ ಕೌಶಿಕ ಒತ್ತಾಯದಿಂದ ಅವಳನ್ನು ಅರಮನೆ ತುಂಬಿಸಿಕೊಂಡನೆಂದು, ತನ್ನ ಭಾಕ್ತಿಕ ಜೀವನಕ್ಕೆ ಅಡ್ಡಿ ಬರದಂತೆ ವರ್ತಿಸಬೇಕೆಂದು ಮಹಾದೇವಿ ಶರತ್ತು ಹಾಕಿದಳೆಂದೂ, ಆ ಶರತ್ತಿಗೆ ಕೌಶಿಕ ವ್ಯತಿರಿಕ್ತವಾಗಿ ನಡೆದುಕೊಂಡ ಕಾರಣ ಅವಳು ಅರಮನೆಯನ್ನು ತೊರೆದು ಮಲ್ಲಿಕಾರ್ಜುನ ಮೋಹಿತೆಯಾಗಿ ಹೊರಟಳೆಂದೂ ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಅವಳು ದಿಗಂಬರೆಯಾಗಿ ಹೊರಬಿದ್ದಳೆಂದು ಕಾವ್ಯಗಳು ಹೇಳುತ್ತವೆ. ವಿದ್ವಾಂಸರೂ ಇದನ್ನು ನಂಬಿದ್ದಾರೆ. ಆದರೆ ಮೂಲತಃ ಕೇಶಾಂಬರಿಯಾಗಿ ಅರಮನೆಯಿಂದ ಹೊರಬಿದ್ದಳೆಂದು ಕವಿಗಳು ಬರೆದಿರುವುದನ್ನು ಮುಂದಿನವರು ತಲೆಗೂದಲಿನಿಂದಲೇ ಮೈಮುಚ್ಚಿಕೊಂಡಳೆಂದು ಭಾವಿಸುತ್ತ ಬಂದಂತಿದೆ" ಗುರುಗಳ ದೀಕ್ಷೆಯ ಸಂದರ್ಭದಲ್ಲಿ ಹೇಳಿದ ಸತಿ-ಪತಿಭಾವದ ತಾತ್ವಿಕ ನಿಲವು ಅವಳ ಆಚರಣೆಯಲ್ಲಿ ಸಂಪೂರ್ಣವಾಗಿ ಅಳವಟ್ಟಿತ್ತು. ಅವಳ ವಚನದಲ್ಲಿ ಹೇಳಿದಂತೆ

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ,
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ!
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು."
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು.
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ."

ಅವಳ ದೇಹದ ಕಣ ಕಣವು ಚನ್ನಮಲ್ಲಿಕಾರ್ಜುನನಿಗೆ ಅರ್ಪಿತವಾಗಿತ್ತು. ಬೇರೆ ಗಂಡನ ಸಂಗವನ್ನು ಆಕೆ ಕನಸಿನಲ್ಲಿಯೂ ಊಹಿಸಿರಲಿಲ್ಲ.

ಪರಿಸ್ಥಿತಿ ಜನ್ಯ ಕಠಿಣ ಪ್ರಸಂಗದಿಂದ ತನ್ನ ತಾಯಿ-ತಂದೆಯರನ್ನು ಸುರಕ್ಷಿತವಾಗಿಡುವ ಹಂಬಲದಲ್ಲಿ ಕೌಶಿಕ ರಾಜನ ಅರಮನೆಯಲ್ಲಿ ಇರಲು ಒಪ್ಪಿಕೊಂಡಿದ್ದಳೇ ಹೊರತಾಗಿ, ಆತನೊಡನೆ ಲಗ್ನ ಮಾಡಿಕೊಂಡಿರಲಿಲ್ಲ. ರಾಜ ಕೌಶಿಕನು ಕೂಡ ಅವಳನ್ನು ಮದುವೆ ಮಾಡಿಕೊಳ್ಳುವ ಆಸೆಯಿಂದ ಅವಳು ಇಟ್ಟ ಶರತ್ತುಗಳಿಗೆ ಒಪ್ಪಿಕೊಂಡಿದ್ದ. ಒಂದು ದಿವಸ ಸಂಯಮ ಕಳೆದುಕೊಂಡು ನಿರಂತರ ಶಿವಯೋಗ, ಶರಣರಸಂಗ, ದಾಸೋಹದಲ್ಲಿ ನಿರತಳಾಗಿದ್ದ ಮಹಾದೇವಿಯನ್ನು ಸ್ಪರ್ಶಿಸಿದ. ಇದರಿಂದಾಗಿ ವ್ಯಥಿತಗೊಂಡ ಅಕ್ಕಮಹಾದೇವಿ ಅರಮನೆಯನ್ನು ತ್ಯಜಿಸಿದಳು.

"ಅರಮನೆಯಿಂದ ಹೊರಬಿದ್ದ ಅಕ್ಕ ಮುಂದೆ ಬೇರೆ ಬೇರೆ ಒರೆಗಲ್ಲುಗಳಿಗೆ ವಸ್ತುವಾಗಿ ನಿಲ್ಲಬೇಕಾಯಿತು. ಅವಳ ಅನೇಕ ವಚನಗಳಲ್ಲಿ ಈ ಮಾತಿಗೆ ನಿದರ್ಶನಗಳು ದೊರೆಯುತ್ತವೆ. "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ" "ಚಂದನವ ಕಡಿದು ಕೊರೆದು ತೇದಡೆ ನೊಂದೆನೆಂದು ಕಂಪಬಿಟ್ಟಿತ್ತೇ" ಮನೆ ಮನೆದಪ್ಪದೆ ಕೈಯ್ಯೊಡ್ಡಿ ಬೇಡುವಂತೆ ಮಾಡಯ್ಯ "ಹಸಿವಾದೊಡೆ ಊರೊಳಗೆ ಭಿಕ್ಷಾನ್ನಗಳುಂಟು, ತೃಷೆಯಾದಡೆ ಕೆರೆ ಭಾವಿಗಳುಂಟು" ಮೊದಲಾದ ವಚನಗಳಲ್ಲಿ ಈ ಅಂಶಗಳನ್ನು ಗುರುತಿಸಬಹುದಾಗಿದೆ. ತನ್ನ ಜೀವನದ ಉತ್ತರಾರ್ಧದಲ್ಲಿ ಅವಳು ಮಲ್ಲಿಕಾರ್ಜುನನ ವಶವರ್ತಿಯಾಗಿ ಲೋಕವನ್ನೆಲ್ಲ ಸುತ್ತಿ, ಕಲ್ಯಾಣವನ್ನು ಪ್ರವೇಶಿಸಿದ್ದು ಮತ್ತೊಂದು ಮುಖ್ಯ ಘಟನೆ. ಅನುಭವಮಂಟಪದಲ್ಲಿ ಅವಳು ಎದುರಿಸಿದ ಪ್ರಶ್ನೆ, ಕೊಟ್ಟ ಉತ್ತರಗಳು ಅವಳ ಚಿಂತನೆಯ ಔನ್ನತ್ಯವನ್ನು ಸಾರುತ್ತವೆ. ಅಲ್ಲಿ ಪ್ರಭುದೇವ, ಬಸವಣ್ಣ ಚೆನ್ನಬಸವಣ್ಣ ಮೊದಲಾದ ಮಹಾತ್ಮರ ಮಧ್ಯ ಎದ್ದು ಕಾಣುವಂತೆ ಬದುಕಿದ ಮಹಾದೇವಿ, ಅವಳೇ ಹೇಳುವಂತೆ "ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡುರೂಪ" ಎಂಬಂತೆ ವ್ಯಕ್ತಿತ್ವವನ್ನು ರೂಪಿಸಿಕೊಂಡಳು. ಮುಂದೆ ಕಲ್ಯಾಣವನ್ನು ಬಿಟ್ಟು ಕದಳಿಗೆ ಹೋದಳು. ಕದಳಿಗೆ ಹೋದನಂತರದ ಅವಳ ಜೀವನದ ಬಗ್ಗೆ ಹೆಚ್ಚಾಗಿ ತಿಳಿದು ಬಂದಿಲ್ಲ ಆದರೆ ಕದಳಿಯಲ್ಲಿಯೇ ಲಿಂಗೈಕ್ಯಳಾದಳೆಂದು ಅನೇಕ ವಚನಗಳಿಂದ ತಿಳಿದುಬರುತ್ತದೆ.

ಅಕ್ಕಮಹಾದೇವಿ ಐಹಿಕ ಜೀವನದಲ್ಲಿ ಪ್ರಖರ ವೈರಾಗಿ ಆಗಿದ್ದು ವೀರ ವೈರಾಗಿಣಿ ಎಂಬ ಬಿರುದಿಗೆ ಪಾತ್ರಳಾಗಿದ್ದಾಳೆ. ಅವಳ ಅಧ್ಯಾತ್ಮಿಕ ಅನುಭಾವ ಸಾಗರದಷ್ಟು ವಿಸ್ತಾರ ಮತ್ತು ಆಳವನ್ನು ಹೊಂದಿದೆ. ಭಕ್ತಿಯ ಸಾಕ್ಷಾತ್ ಮೂರ್ತರೂಪವಾದ ಅವಳು ಮಧುರ ಭಕ್ತಿಯ ವಿಶಿಷ್ಟನಿಧಿಯಾಗಿ ಪರಿಣಮಿಸಿದ್ದಳು. ಈ ಸಂಪ್ರದಾಯದಲ್ಲಿದ್ದ ಅನೇಕ ಪ್ರತಿಭಾವಂತ ಸ್ತ್ರೀಯರ ಅನುಭಾವದಾಚೆಗಿನ ಮೇರುವಿಗೆ ತಲುಪಿದವಳಾಗಿದ್ದಳು. ಅವಳು ರಚಿಸಿದ ವಚನಗಳಲ್ಲಿ ಅವಳ ಜೀವನದ ಈ ಎಲ್ಲಾ ಅಂಗಗಳು ಸ್ಪಟಿಕದಂತೆ ಸುಸ್ಪಷ್ಟವಾಗಿ ಕಂಡುಬರುತ್ತವೆ.

ಇಲ್ಲಿಯವರೆಗೆ "ಅವಳ ೪೩೪ ವಚನಗಳು ಲಭ್ಯವಾಗಿವೆ. ಇದರ ಹೊರತಾಗಿ ಅವಳು ರಚಿಸಿದ ಯೋಗಾಂಗ ತ್ರಿವಿಧಿ ಸ್ವರವಚನ, ಸೃಷ್ಟಿಯ ವಚನ, ಮಂತ್ರಗೋಪ್ಯ ಗಳೆಂಬ ಲಘುಕೃತಿಗಳು ಕೂಡ ದೊರೆತಿವೆ" ಅಕ್ಕಮಹಾದೇವಿಯ ವಚನಗಳು ಅಧ್ಯಾತ್ಮಿಕ, ಮಾನಸಿಕ ಮತ್ತು ರಸಜ್ಞತೆಗಳ ಉತ್ಕೃಷ್ಟ ಸಂಗಮವಾಗಿದ್ದು, ಅವಳಿಗೆ ಪ್ರೇಮರೂಪದಲ್ಲಾದ ಪರಮಾತ್ಮನ ಸರ್ವೋತ್ಕೃಷ್ಟ ಸೌಂದರ್ಯ ದರ್ಶನದ ಪರಿಪೂರ್ಣ ಅಭಿವ್ಯಕ್ತಿಗಳಾಗಿವೆ.

ಜ್ಞಾನಾತೀತವಾದ ಆ ನಿಜಸತ್ಯವನ್ನೇ ಅವಳ ಪ್ರತಿಯೊಂದು ವಿಚಾರ ಮತ್ತು ಭಾವನೆಯ ಉದ್ದೇಶವಾಗಿಟ್ಟುಕೊಂಡಿದ್ದರಿಂದಾಗಿ ಪ್ರೇಮ ಅವಳ ಆತ್ಮ ಮತ್ತು ಮನಸ್ಸಿನಲ್ಲಿ ಪರಮಸ್ಥಾನವನ್ನು ಪಡೆದದ್ದು ಕಂಡು ಬರುತ್ತದೆ. ಇದರಿಂದಾಗಿ ಅವಳ ಅಧ್ಯಾತ್ಮಿಕ ಜೀವನ ಅತ್ಯಂತ ಕ್ರಿಯಾಶೀಲವಾಗಿ ಸೂಕ್ಷ್ಮಸ್ಥರಗಳಲ್ಲಿ ವಿಂಗಡಿಸಲ್ಪಟ್ಟು ಅವಳ ಜೀವನವೇ ಒಂದು ಕಲೆಯಾದಂತೆ ಕಾಣುತ್ತದೆ. ಈ ಸೂಕ್ಷ್ಮತೆಯ ತರಳುತನದ ಅಭಿವ್ಯಕ್ತಿ ಅವಳಲ್ಲಿ ಆ ನಿಜಸತ್ಯದ ಜೊತೆಗಿನ ಗೂಢಪ್ರೇಮದ ವಿವಿಧ ಅಂಗವಾಗಿ ಕಂಡುಬರುತ್ತದೆ.

ಅಕ್ಕಮಹಾದೇವಿಯ ವಚನಗಳು ಮನುಷ್ಯನ ಲೌಕಿಕ ಮತ್ತು ಅಲೌಕಿಕ ಸಂಬಂಧಗಳಲ್ಲಿಯ ವಿಷಮತೆಯನ್ನು ತಳ್ಳಿಹಾಕಿ ಮನುಷ್ಯ ಜೀವನದಲ್ಲಿಯ ದ್ವಂದ್ವಗಳ ಘರ್ಷಣೆಯನ್ನು ನಿವಾರಿಸಿ ಜೀವನದಲ್ಲಿ ಸಾಮರಸ್ಯ ಮೂಡಿಸುತ್ತವೆ. ಇದನ್ನೇ ಈ ಕೆಳಗಿನ ವಚನದಲ್ಲಿ ಕಾಣಬಹುದು.

"ಕಂಗಳೊಳಗೆ ತೊಳಗಿ ಬೆಳಗುವ
ದಿವ್ಯ ರೂಪವ ಕಂಡು ಮೈಮರೆದೆನವ್ವಾ.
ಮಣಿ ಮುಕುಟದ ಫಣಿಕಂಕಣದ ನಗೆಮೊಗದ
ಸುಲಿಪಲ್ಲ ಸೊಬಗನ ಕಂಡು ಮನಸೋತೆನವ್ವಾ.
ಇಂತಾಗಿ ಚೆನ್ನಮಲ್ಲಿಕಾರ್ಜುನನೆನ್ನ ಮದುವಣಿಗ,
ಆನು ಮದುವಣಿಗೆ ಕೇಳಾ ತಾಯೆ"

ಇಲ್ಲಿ ಜ್ಞಾನಾತೀತವಾದ ನಿಜಸತ್ಯರೂಪಿ ಪರಮಾತ್ಮನನ್ನು ಲೌಕಿಕ ಪತಿಯನ್ನಾಗಿ ಸ್ವೀಕರಿಸಿದ್ದಷ್ಟೇ ಅಲ್ಲದೆ ಆತನ ರೂಪರಸವನ್ನು ವರ್ಣಿಸಿ ಇಂದ್ರಿಯ ಜನ್ಯ ಸುಖಗಳಿಗೂ ಕೂಡ ಒಳಪಡಿಸಿದ್ದಾಳೆ.

ಹೀಗಾಗಿ ಲೌಕಿಕ-ಅಲೌಕಿಕ ಎಂಬ ಭೇದವನ್ನೇ ತಳ್ಳಿಹಾಕಿ ಮನುಷ್ಯನ ಮನಸ್ಸಿನಲ್ಲಿಯ ಈ ಬಗೆಗಿನ ದ್ವಂದ್ವವನ್ನೇ ಇರದಂತೆ ಮಾಡಿದ್ದಾಳೆ. ಇದರ ಜೊತೆಗೆ ಭಿನ್ನ ವಿಭಿನ್ನ ಲೌಕಿಕ ವಸ್ತುಗಳಲ್ಲಿಯ ಮನುಷ್ಯನ ಪ್ರೇಮವನ್ನು ತಿರುಗಿಸಿ ಆ ಅಲೌಕಿಕ ವಿಶಾಲವನ್ನೇ ಪ್ರೀತಿಸುವಂತೆ ಮಾಡಿದ್ದಾಳೆ. ಪ್ರಭುದೇವರ ಶಬ್ದದಲ್ಲಿ ಹೇಳುವದಾದರೆ "ಬಯಲ ಬಯಲಿಗೆ ಪ್ರೀತಿಸುವಂತೆ ಮಾಡಿದ್ದಾಳೆ. ದ್ವಂದ್ವವಿರಹಿತ ಮನುಷ್ಯ ಸತ್ಯದೊಡಗಿನ ಸಾಮರಸ್ಯವನ್ನು ಸಾಧಿಸಿ ಸುಖಮಯವಾದ ಜೀವನವನ್ನು ಸಾಗಿಸುವಂತೆ ಮಾಡಿದ್ದಾಳೆ.

"ಇದು ಅಧ್ಯಾತ್ಮಿಕ ಸಾಧನೆಯ ಸಾಂಕೇತಿಕ ನಿಲುವು; ಲೌಕಿಕದಲ್ಲಿದ್ದು ಇದನ್ನು ಸಾಧಿಸುವುದು ಸಾಧ್ಯ; ಮತ್ತು ಅದೇ ಸರಿಯಾದ ಕ್ರಮ" ಎಂಬುದನ್ನು ತೋರಿಸಿದ್ದಾಳೆ. ಇದೇ ತರಹ ಆಕೆಯ ವಚನಗಳು ಸಾಧಕನ ಅಂತರಂಗ ಮತ್ತು ಬಹಿರಂಗ ಬೆಳವಣಿಗೆಯ ಕ್ರಮಕೂಡ ತೋರಿಸುತ್ತವೆ.

"ಕಾಮವುಳ್ಳವರಿಗೆ ಕಾಯಸಂಗ ಮಚ್ಚು ನೋಡಾ
ಕಾಮವಿಲ್ಲದವರಿಗೆ ಲಿಂಗಸಂಗ ಮಚ್ಚು ನೋಡಾ
ಕಾಮವಿಕಾರಿ ಕಾಯದತ್ತ ಮುಂತಾದಡೆ
ನಾ ನಿಮ್ಮತ್ತ ಮುಂತಾದೆ
ಚೆನ್ನಮಲ್ಲಿಕಾರ್ಜುನಯ್ಯಾ,
ಕಾಮವಿಕಾರಿಯ ಸಂಗವ ಹೊದ್ದಿದಡೆ ನಿಮ್ಮಾಣೆ"

ಇಲ್ಲಿ ಸಾಧಕನು ತನ್ನ ಇಂದ್ರಿಯಗಳನ್ನು ನಿಗ್ರಹಿಸಿ, ಭಾವ ಮತ್ತು ಮನಸ್ಸನ್ನು ಆ ಪರಮಾತ್ಮನೆಡೆಗೆ ಹಚ್ಚುವ ಅವಶ್ಯಕತೆಯನ್ನು ಒತ್ತಿ ಹೇಳುತ್ತಾಳೆ. ದೇಹಬುದ್ಧಿಯನ್ನು ಗೆಲ್ಲದ ಹೊರತು ನಿಜದರಿವು ಆಗಲಾರದೆಂದೆ ಅವಳ ಭಾವನೆ. ಪರಮಾತ್ಮನ ನಿಲುವಿನ ಅರಿವಾಗುವುದಕ್ಕೆ ಮನುಷ್ಯನು ತನ್ನ ಮನಸ್ಸಿನ ಬಂಧನದಾಚೆ ಹೋಗಬೇಕಾಗುತ್ತದೆಂದು ಅಕ್ಕಮಹಾದೇವಿ ಹೇಳುತ್ತಾಳೆ.

"ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ
ಮನ ಬಂದುದನು ಬಯಸಿ, ಬೇವುತ್ತಿದ್ದೇನಯ್ಯಾ,
ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನಾ"

ಮನುಷ್ಯ ಮನಸ್ಸಿನ ಕಲಾಪಕ್ಕೆ ಒಳಗಾದರೆ ಅದರ ಬಂಧನಕ್ಕೆ ಸಿಲುಕಿಕೊಂಡು ನಿಜವನರಿಯದೆ ಹೋಗುತ್ತಾನೆಂದು ಅಕ್ಕ ಹೇಳುತ್ತಾಳೆ. ಕೊನೆಗೆ ಸಾಧಕನು ಪರಮಾತ್ಮನ ಸಾನ್ನಿಧ್ಯವನ್ನು ತಲುಪಿದಾಗಿನ ಸ್ಥಿತಿಯನ್ನು ಕೂಡಾ ತಿಳಿಸಿ ಮಾನವ ಮತ್ತು ಪರಮಾತ್ಮನ ಸಂಬಂಧವನ್ನು ತೋರಿಸಿದ್ದಾಳೆ.

"ನಾನು ನಿನಗೊಲಿದೆ, ನೀನು ಎನಗೊಲಿದೆ
ನೀನೆನ್ನನಗಲದಿಪ್ಪೆ, ನಾನಿನ್ನಗಲದಿಪ್ಪೆನಯ್ಯಾ
ನಿನಗೆ ಎನಗೆ ಬೇರೊಂದು ಠಾವುಂಟೇ?
ನೀನು ಕರುಣೆಯೆಂಬುದ ಬಲ್ಲೆನು
ನೀನಿರಿಸಿದ ಗತಿಯೊಳಗಿಪ್ಪವಳಾನು
ನೀನೆ ಬಲ್ಲೆ ಚೆನ್ನಮಲ್ಲಿಕಾರ್ಜುನಾ.

ಭಕ್ತ ತನ್ನ ಸಾಧನೆಯಿಂದಾಗಿ ಅಧ್ಯಾತ್ಮಿಕತೆಯ ಸರ್ವೋನ್ನತ ಸ್ಥಾನಕ್ಕೆ ತಲುಪಿದಾಗ ಜ್ಞಾನಾತೀತವಾದ ನಿಜಸತ್ಯದ ಅರಿವಾಗಿ ತಾನು ಆ ನಿಜಸತ್ಯದ ಹೊರಗಿಲ್ಲವೆಂಬುದು ಕಂಡು ಬರುತ್ತದೆ. ಹೀಗಾಗಿ ಭಕ್ತ ಪರಮಾತ್ಮನಾಗುತ್ತಾನೆ. ಆ ಪರಮಾತ್ಮನೆ ಭಕ್ತನಾಗಿ ಮನುಷ್ಯನ ಇಹಪರಗಳ ಠಾವು ಒಂದೇ ಆಗಿದ್ದುದು ಕಂಡುಬರುತ್ತದೆ.

ಅದಕ್ಕಾಗಿಯೇ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನನ್ನು ಕೇಳುತ್ತಾಳೆ, "ನಿನಗೆ ಎನಗೆ ಬೇರೊಂದು ಠಾವುಂಟೆ"? ಎಂದು ಅಕ್ಕಮಹಾದೇವಿಯ ಜೀವನಕ್ರಮವನ್ನು ಕಂಡಾಗ ಅವಳು ವೈರಾಗ್ಯದಿಂದ ಜೀವನ ಆರಂಭಿಸಿ, ಭಕ್ತಿಯಸಾಕ್ಷಾತ್ ಮೂರ್ತಿಯಾಗಿ, ಮುಂದೆ ಸ್ವಯಂ ಪರಮಾತ್ಮನ ಸ್ವರೂಪದಲ್ಲಿ ಒಂದಾದುದು ಕಂಡುಬರುತ್ತದೆ.

ಈ ತರಹ ತನ್ನ ಆಳವಾದ ಅಧ್ಯಾತ್ಮಿಕ ಜ್ಞಾನ ಸದೃಢ ಚರಿತ್ರೆ, ಯೋಗಸಾಧನೆ ಮತ್ತು ಪ್ರಖರ ವೈರಾಗ್ಯದಿಂದ ಕೇವಲ ೧೮ ರಿಂದ ೨೦ ವರ್ಷದ ಜೀವನ ಕಾಲದಲ್ಲಿಯೇ ಕರ್ನಾಟಕದ ಕ್ಷಿತಿಜದ ಮೇಲೆ ಹಿಂದೆಂದೂ ಕಾಣದಂಥ ಜ್ಞಾನಸೂರ್ಯನಾಗಿ ಚೆಲ್ಲಿದ ಬೆಳಕು ೮೦೦ ವರ್ಷಗಳ ಕಾಲ ಮೀರಿ ಹೋದರೂ ಇಂದಿಗೂ ದೇಶದ ಮೂಲೆ ಮೂಲೆಯನ್ನು ಬೆಳಗಿಸುತ್ತಿದೆ.

**ಆಕರ ಗ್ರಂಥಗಳು**

೧) ಕನ್ನಡ ವಿಷಯ ಕೋಶ ಸಂ-೧
೨) ಕನ್ನಡ ವಿಷಯ ಕೋಶ ಸಂ-೨
೩) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ (ಕಲೆ, ಸಾಹಿತ್ಯ-೫)
೪) ಬಸವಣ್ಣನವರ ದೇವರು – ರಂಜಾನ್ ದರ್ಗಾ
೫) ಲಿಂಗವ ಪೂಜಿಸಿ ಫಲವೇನಯ್ಯಾ? – ರಂಜಾನ್ ದರ್ಗಾ
೬) ಏಲೇಶ್ವರ ಕೇತಯ್ಯ – ಡಾ. ಈ.ಎಸ್.ಉಪಾಧ್ಯ